# ಅಪ್ಪ-ಮಗನ ಪುಳಕ-ನಡುಕ

ಅಪ್ಪ ದೇವರಾಜ್, ಮಗ ಪ್ರಜ್ವಲ್ ಇಬ್ಬರೂ ಖುಷಿಯಲ್ಲಿದ್ದಾರೆ. ಕೊಂಚ ಆತಂಕವೂ ಅವರ ಮಾತುಗಳಲ್ಲಿ ಇಣುಕುತ್ತದೆ. 'ನೀನಾದೆ ನಾ' ಸಿನಿಮಾ ಪ್ರೇಕ್ಷಕರಿಗೆ ಮುಖಾಮುಖಿ ಆಗುತ್ತಿರುವ ಸಂದರ್ಭದಲ್ಲಿ ಈ ಪುಳಕ ಹಾಗೂ ನಡುಕ ಇದ್ದುದೇ. ಆದರೆ, ಅಪ್ಪ ಮಕ್ಕಳ ಈ ಕ್ಷಣದ ಭಾವನೆಗಳಿಗೆ ಬೇರೆಯದೇ ಅರ್ಥವಿದೆ. ಇವರಿಬ್ಬರ ಪಾಲಿಗೆ 'ನೀನಾದೆ ನಾ' ವೃತ್ತಿ ಬದುಕಿನ ಹತ್ತರಲ್ಲಿ ಹನ್ನೊಂದು ಎನ್ನುವಂತಹ ಚಿತ್ರವಲ್ಲ. ಇದು ದೇವರಾಜ್ ಕುಟುಂಬ ನಿರ್ಮಿಸಿರುವ ಸಿನಿಮಾ.

ಕಂದಾಸ್ 'ನೀನಾದೆ ನಾ' ಚಿತ್ರದ ನಿರ್ದೇಶಕರು. ಈ ತಮಿಳು ಮೂಲದ ನಿರ್ದೇಶಕರ ಗರಡಿಯಲ್ಲಿ ಸಿನಿಮಾ ಸೊಗಸಾಗಿ ಮೂಡಿಬಂದಿದೆ ಎನ್ನುವುದು ದೇವರಾಜ್‌ರ ವಿಶ್ವಾಸ. ಈ ಚಿತ್ರದ ಮೂಲಕ ತಾವು ನಿರ್ಮಾಪಕರಾಗಿ ಹಾಗೂ ತಮ್ಮ ಪುತ್ರ ನಾಯಕನಾಗಿ ಗೆಲುವು ಕಾಣುವ ವಿಶ್ವಾಸ ಅವರದು.

ಪ್ರಜ್ವಲ್ ಅವರಿಗೂ ತಮ್ಮ ಹೋಂ ಬ್ಯಾನರ್‌ನ ಸಿನಿಮಾದ ಬಗ್ಗೆ ಹೆಚ್ಚು ನಿರೀಕ್ಷೆಗಳಿವೆ. ತಾವು ಸಿನಿಮಾದ ನಾಯಕನಾದರೂ, 'ಕಥೆ ಚಿತ್ರದ ಮೊದಲ ಹೀರೋ. ಕ್ಯಾಮೆರಾಮೆನ್ ಶ್ರೀನಿವಾಸ್ ಎರಡನೇ ಹೀರೋ' ಎಂದು ಹೇಳುವ ವಿನಯ ಅವರದ್ದು. 'ಪ್ರತಿಯೊಬ್ಬರಲ್ಲೂ ಒಂದೊಂದು ಕನಸು ಇರುತ್ತದೆ. ಒಬ್ಬರ ಪಾಲಿನ ಕನಸು ಇನ್ನೊಬ್ಬರ ಪಾಲಿಗೆ ದುಃಸ್ವಪ್ನ ಆಗಬಾರದು. ಈ ಕನಸುಗಳ ತಾಕಲಾಟದ ಕಥೆ ನಮ್ಮ ಚಿತ್ರದ್ದು' ಎನ್ನುತ್ತಾರೆ ಪ್ರಜ್ವಲ್.

ಅಂದಹಾಗೆ, ಪ್ರಜ್ವಲ್‌ಗೆ ಜೋಡಿಯಾಗಿ ಪ್ರಿಯಾಂಕ ಕಂಡ್ವಾಲ್ ಹಾಗೂ ಅಂಕಿತಾ ಮಹೇಶ್ವರಿ ನಟಿಸಿದ್ದಾರೆ. ಸಂಗೀತ ಅರ್ಜುನ್ ಜನ್ಯ ಅವರದ್ದು.





# ಹಾಡುಗಳ ಮತಾಪು

ದೀಪಾವಳಿ ಸನ್ನಿಹಿತ ಆಗುತ್ತಿರುವಂತೆ 'ಬೆಂಕಿಪಟ್ಣ'ದ ಮತಾಪುಗಳು ನಿಧಾನಕ್ಕೆ ಸುರುಸುರು ಎನ್ನುತ್ತಿವೆ. ಅಂದಹಾಗೆ, ಇದು ಹಾಡುಗಳ ಮತಾಪು.

'ಬೆಂಕಿಪಟ್ಣ' ಟಿ.ಕೆ. ದಯಾನಂದ ನಿರ್ದೇಶನದ ಸಿನಿಮಾ. ಕಥೆಗಾರನಾಗಿ, ಸಾಮಾಜಿಕ ಕಾರ್ಯಕರ್ತನಾಗಿ ಸಹೃದಯರ ನಡುವೆ ಪರಿಚಿತರಾಗಿರುವ ದಯಾನಂದ ಕಡು ಸಿನಿಮಾ ಮೋಹಿಯೂ ಹೌದು. ಆ ಸಿನಿಮೋಹದ ಫಲವೇ 'ಬೆಂಕಿಪಟ್ಣ'. ತಮ್ಮ ಕಥೆಯೊಂದನ್ನು ತುಸು ಮಾರ್ಪಡಿಸಿ ಅವರು ಸಿನಿಮಾ ಕಥನವಾಗಿಸಿದ್ದಾರೆ. ದಯಾನಂದ್‌ರ ಎಲ್ಲ ಕಥೆಗಳು ಮನುಷ್ಯನ ಆತ್ಮಸಾಕ್ಷಿಯನ್ನು ಕಲಕುವ ರಚನೆಗಳೇ ಆಗಿವೆ. ಆ ಕಾರಣದಿಂದಲೇ 'ಬೆಂಕಿಪಟ್ಣ' ಕೂಡ ನಮ್ಮೊಳಗನ್ನು ಕಾಣಿಸುವ ಸಿನಿಮಾ ಆಗಲಿದೆ ಎನ್ನುವ ನಿರೀಕ್ಷೆ ಸಹೃದಯರಲ್ಲಿ ಮೂಡಿದೆ.

ಪ್ರತಾಪ್ ನಾರಾಯಣ್ ಹಾಗೂ ಅನುಶ್ರೀ ಚಿತ್ರದ ಪ್ರಧಾನ ಭೂಮಿಕೆಯಲ್ಲಿದ್ದಾರೆ. ತಾರಾಗಣದಲ್ಲಿ ಎದ್ದುಕಾಣುವ ಮತ್ತೊಂದು ಹೆಸರು ಅರುಣ್ ಸಾಗರ್. ಕಳೆದ ವಾರವಷ್ಟೇ 'ಬೆಂಕಿಪಟ್ಣ'ದ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆ ಸಮಾರಂಭ ನಡೆದಿದೆ. ಸ್ಟೀವ್ ಮತ್ತು ಕೌಶಿಕ್ ಸಂಗೀತ ನಿರ್ದೇಶನದ– ಜಯಂತ ಕಾಯ್ಕಿಣಿ, ಹೃದಯಶಿವ, ಚೇತನ್ ಸದಾನಂದ್ ಹಾಗೂ ದಿನೇಶ್‌ಕುಮಾರ್ ರಚನೆಯ– ಐದು ಗೀತೆಗಳಿಗೆ ಕಾಡುವ ಗುಣ ಇರುವಂತಿದೆ.

ಆಡಿಯೊ ಬಿಡುಗಡೆ ಎಂದರೆ ಸಿನಿಮಾ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ ಎಂದೇ ಅರ್ಥ. ದೀಪಾವಳಿ ಮತ್ತು ಕನ್ನಡ ಮಾಸದ ಸಂದರ್ಭದಲ್ಲಿ 'ಬೆಂಕಿಪಟ್ಣ' ತೆರೆಕಾಣುವ ನಿರೀಕ್ಷೆಯಿದೆ.

ರೀಮೇಕ್ ಚಿತ್ರಗಳ ಭರಾಟೆಯೇ ಹೆಚ್ಚಾಗಿರುವ ಸಂದರ್ಭದಲ್ಲಿ ರೂಪುಗೊಂಡಿರುವ 'ಬೆಂಕಿಪಟ್ಣ' ಅಪ್ಪಟ ಕನ್ನಡ ಕಥನದ ಸಿನಿಮಾ; ಇದಕ್ಕೂ ಮುಖ್ಯವಾಗಿ, ಪ್ರತಿಭೆಯನ್ನೇ ನೆಚ್ಚಿಕೊಂಡ ತರುಣ ತರುಣಿಯರು ರೂಪಿಸಿದ ಸಿನಿಮಾ. ಈ ಸಿನಿಮಾ ಗೆದ್ದಲ್ಲಿ ಕನ್ನಡ ಚಿತ್ರರಂಗದಲ್ಲಿ ಒಂದಿಷ್ಟು ಪ್ರಯೋಗಶೀಲ ಮನಸ್ಸುಗಳು ತೊಡಗಿಕೊಳ್ಳಲಿಕ್ಕೆ ಪ್ರೇರಣೆ ಒದಗಿಸಬಹುದು.

■ ರಘು